# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಹೆಚ್.ಎಸ್. ಗೋಪಿನಾಥ್
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 277

ಉತ್ತರಿಸಬೇಕಾದ ದಿನಾಂಕ : 06.12.2023

ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಪಶುಸಂಗೋಪನೆ ಇಲಾಖೆಯಿಂದ ರೈತರಿಗೆ ಸಿಗುವ ಯೋಜನೆಗಳಾವವು; | 2023-24 ನೇ ಸಾಲಿನಲ್ಲಿ ಪಶು ಸಂಗೋಪನೆ ಇಲಾಖೆಯ ವತಿಯಿಂದ ರೈತರಿಗಾಗಿ ರೂಪಿಸಲಾಗಿರುವ ಯೋಜನೆಗಳು ಹಾಗೂ ಸೌಲಭ್ಯಗಳ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ | ಪಶು ಭಾಗ್ಯ ಯೋಜನೆಯಡಿ ಫಲಾನುಭವಿಗಳ ಆಯ್ಕೆಗೆ ಅನುಸರಿಸಲಾಗುವ ಮಾನದಂಡಗಳೇನು; | 2023-24ನೇ ಸಾಲಿನ ಹಾಲು ಉತ್ಪಾದಕರಿಗೆ ಉತ್ತೇಜನ ಕಾರ್ಯಕ್ರಮದ ಉಳಿಕೆ ಅನುದಾನದಲ್ಲಿ ರಾಜ್ಯ ಅಭಿವೃದ್ಧಿ ಪರಿಷತ್ ಸಭೆಯ ನಡವಳಿಯಂತೆ ಎಸ್.ಸಿ.ಪಿ / ಟಿ.ಎಸ್.ಪಿ ಫಲಾನುಭವಿಗಳಿಗೆ ಒಂದು ಮಿಶ್ರ ತಳಿ ಘಟಕವನ್ನು ಅನುಷ್ಠಾನಗೊಳಿಸಲು ಆದೇಶಿಸಲಾಗಿರುತ್ತದೆ. ಅದರಂತೆ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ. ಸದರಿ ಮಾರ್ಗಸೂಚಿಯಲ್ಲಿ ಈ ಕೆಳಕಂಡಂತೆ ಫಲಾನುಭವಿಗಳ ಆಯ್ಕೆ ಮಾಡಲಾಗುವುದು.<br>1. ಫಲಾನುಭವಿಗಳನ್ನಾಗಿ ಕೂಲಿ ಕೃಷಿ ಕಾರ್ಮಿಕರು ಮತ್ತು ಪಶುಸಂಗೋಪನೆಯಲ್ಲಿ ತೊಡಗಿಸಿಕೊಂಡ ಆಸಕ್ತರನ್ನು ಆಯ್ಕೆ ಮಾಡಲಾಗುವುದು.<br>2. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಫಲಾನುಭವಿಗಳು ಜಾತಿ ಪ್ರಮಾಣ ಪತ್ರವನ್ನು ಹೊಂದಿರಬೇಕು (ಪ್ರಮಾಣ ಪತ್ರದಲ್ಲಿ RD No. ಇರಬೇಕು)<br>3. ಅರ್ಜಿದಾರರು FRUITS ತಂತ್ರಾಂಶದಲ್ಲಿ ನೋಂದಾಯಿಸಿರಬೇಕು<br>ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸಹಾಯಕ ನಿರ್ದೇಶಕರು/ ಮುಖ್ಯ ಪಶುವೈದ್ಯಾಧಿಕಾರಿಗಳು (ಆಡಳಿತ) ಸಾಕಷ್ಟು ಪ್ರಚಾರ ನೀಡಿ (ಪತ್ರಿಕಾ ಪ್ರಕಟಣೆ ಮೂಲಕ ಆಸಕ್ತಿಯುಳ್ಳವರಿಂದ "ಪಶುಭಾಗ್ಯ" ತಂತ್ರಾಂಶದ ಮುಖಾಂತರ ಫಲಾನುಭವಿಗಳ ಅರ್ಜಿ ಪಡೆದು, ವಿಧಾನ ಸಭಾ ಕ್ಷೇತ್ರದ ಆಯ್ಕೆ ಸಮಿತಿ ಮೂಲಕ ನಿಗದಿಪಡಿಸಿದ ಯೋಜನೆ, ಘಟಕ ಮತ್ತು ಗುರಿಗೆ ಅನುಗುಣವಾಗಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವುದು. |

| | | |
|---|---|---|
| **ಫಲಾನುಭವಿ ಆಯ್ಕೆ ಸಮಿತಿ ಹಾಗೂ ಮೇಲ್ವಿಚಾರಣೆ ಸಮಿತಿ** | | |
| 1. | ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು | ಅಧ್ಯಕ್ಷರು |
| 2. | ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಖಾಯಂ ಆಗಿ ವಾಸಿಸುತ್ತಿರುವ ವಿಧಾನ ಪರಿಷತ್ತಿನ ಶಾಸಕರು (ವಿಧಾನ ಪರಿಷತ್ತು) | ಸದಸ್ಯರು |
| 3. | ಉಪ ವ್ಯವಸ್ಥಾಪಕರು ಸಂಬಂಧಿಸಿದ ಜಿಲ್ಲಾ ಹಾಲು ಒಕ್ಕೂಟ/ಪ್ರತಿನಿಧಿ | ಸದಸ್ಯರು |
| 4. | ಕಾರ್ಯನಿರ್ವಹಣಾಧಿಕಾರಿ, ತಾಲ್ಲೂಕು ಪಂಚಾಯತ್ | ಸದಸ್ಯರು |
| 5. | ಮಹಿಳಾ ಮಕ್ಕಳ ಕಲ್ಯಾಣ ಅಧಿಕಾರಿ | ಸದಸ್ಯರು |
| 6. | ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿ | ಸದಸ್ಯರು |
| 7. | ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದಿಂದ–ಒಬ್ಬರು (ಸರ್ಕಾರದಿಂದ ನಾಮನಿರ್ದೇಶನಗೊಳ್ಳುವ) | ಅಧಿಕಾರೇತರ ಸದಸ್ಯರು |
| 8. | ಹಿಂದುಳಿದ ವರ್ಗಗಳು/ ಅಲ್ಪ ಸಂಖ್ಯಾತ ಸಮುದಾಯದಿಂದ–ಒಬ್ಬರು (ಸರ್ಕಾರದಿಂದ ನಾಮನಿರ್ದೇಶನಗೊಳ್ಳುವ) | ಅಧಿಕಾರೇತರ ಸದಸ್ಯರು |
| 9. | ಸಾಮಾನ್ಯ ವರ್ಗದಿಂದ–ಒಬ್ಬರು (ಸರ್ಕಾರದಿಂದ ನಾಮನಿರ್ದೇಶನಗೊಳ್ಳುವ) | ಅಧಿಕಾರೇತರ ಸದಸ್ಯರು |
| 10. | ಮಹಿಳಾ ಸದಸ್ಯರು–ಒಬ್ಬ ರು (ಸರ್ಕಾರದಿಂದ ನಾಮನಿರ್ದೇಶನಗೊಳ್ಳುವ) | ಅಧಿಕಾರೇತರ ಸದಸ್ಯರು |
| 11. | ಮುಖ್ಯಪಶುವೈದ್ಯಾಧಿಕಾರಿ(ಆಡಳಿತ) ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ | ಸದಸ್ಯ ಕಾರ್ಯದರ್ಶಿ |

| | | |
|---|---|---|
| ಇ | ಈ ಯೋಜನೆಗೆ ವಾಣಿಜ್ಯ ಬ್ಯಾಂಕುಗಳಲ್ಲಿ ಸಾಲ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರವು ಕೈಗೊಳ್ಳಬಹುದಾದ ಕ್ರಮಗಳೇನು; | ವಾಣಿಜ್ಯ ಬ್ಯಾಂಕುಗಳಲ್ಲಿ ಸಾಲ ನೀಡದಿರುವುದರ ಕುರಿತು ಯಾವುದೇ ಪ್ರಕರಣ ವರದಿಯಾಗಿರುವುದಿಲ್ಲ. |
| **ಈ** | ಪಶು ಭಾಗ್ಯ ಯೋಜನೆ ಜಾರಿಯಲ್ಲಿದೆಯೇ; ಇಲ್ಲದಿದ್ದಲ್ಲಿ, ಹೊಸದಾಗಿ ಈ ಯೋಜನೆಗಳ ಬಗ್ಗೆ ಸರ್ಕಾರ ಚಿಂತಿಸಿದೆಯೇ? (ಸಂಪೂರ್ಣ ವಿವರ ನೀಡುವುದು) | 2023–24ನೇ ಸಾಲಿನಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ ಪಶುಭಾಗ್ಯ ಯೋಜನೆ ಜಾರಿಯಲ್ಲಿರುವುದಿಲ್ಲ. ಮುಂದುವರೆದು, ಹಾಲು ಉತ್ಪಾದಕರ ಪ್ರೋತ್ಸಾಹ ಸಹಾಯಧನದ ಉಳಿಕೆಯಾದ ರೂ.10.00 ಕೋಟಿ ಅನುದಾನದಲ್ಲಿ ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ ರೂ.65000/– ಘಟಕದ ವೆಚ್ಚದಲ್ಲಿ ಒಂದು ಮಿಶ್ರ ತಳಿ ಹಸುವನ್ನು 1708 ಫಲಾನುಭವಿಗಳಿಗೆ ವಿತರಿಸಲು ಕ್ರಮವಹಿಸಲಾಗುತ್ತಿದೆ. ಜಿಲ್ಲಾವಾರು ವಿವರವನ್ನು **ಅನುಬಂಧ–2** ರಲ್ಲಿ ನೀಡಲಾಗಿದೆ. |

ಇ–ಪಸಂಮೀ **221** ಸಲೆವಿ **2023**

ಕೆ. ವೆಂಕಟೇಶ್

**(ಕೆ. ವೆಂಕಟೇಶ್)**

**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**

## ಅನುಬಂಧ-1

### ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಿಂದ 2023-24 ನೇ ಸಾಲಿನಲ್ಲಿ ರೈತರಿಗಾಗಿ ರೂಪಿಸಲಾದ ಯೋಜನೆಗಳ ವಿವರ .

<table>
<tr><th>ಕ್ರ ಸಂ</th><th>ಕಾರ್ಯಕ್ರಮ</th><th>ವಿವರ</th></tr>
<tr><td></td><td colspan="2">ರಾಜ್ಯವಲಯದ ಕಾರ್ಯಕ್ರಮಗಳು</td></tr>
<tr><td>1</td><td>ಹಾಲು ಉತ್ಪಾದಕರಿಗೆ ಉತ್ತೇಜನ:</td><td><ul><li>ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಹಾಲು ಸರಬರಾಜು ಮಾಡುವ ಸದಸ್ಯರಿಗೆ ಪ್ರತಿ ಲೀಟರ್ ಗುಣಾತ್ಮಕ ಹಾಲಿಗೆ ರೂ. 5/- ರಂತೆ ಪ್ರೋತ್ಸಾಹಧನ ಪಾವತಿ.</li></ul></td></tr>
<tr><td>2</td><td>ಕರ್ನಾಟಕ ಕುರಿ ಮತ್ತು ಕುರಿ ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ:</td><td><ul><li>6+1 ಕುರಿ/ಮೇಕೆ ಘಟಕ ವಿತರಣೆ: ನಿಗಮದಲ್ಲಿ ನೊಂದಣಿಯಾಗಿರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸದಸ್ಯರುಗಳಿಗೆ 6+1 ಕುರಿ/ಮೇಕೆ ಘಟಕ ವಿತರಣೆ.</li></ul>
<table>
<tr><th>ಘಟಕದವಿವರಗಳು</th><th>ಘಟಕದ ವೆಚ್ಚ</th><th>ಸಹಾಯಧನ ಶೇಕಡ 90%</th><th>ಫಲಾನುಭವಿ ವಂತಿಕೆ 10%</th></tr>
<tr><td>6+1 ಕುರಿ/ಮೇಕೆ ಘಟಕ ವಿತರಣೆ</td><td>ರೂ:45000/-</td><td>ರೂ:40500/-</td><td>ರೂ.4500/-</td></tr>
</table>
<ul><li>ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆ: ರಾಜ್ಯದಲ್ಲಿನ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳಲ್ಲಿನ ಅರ್ಹ ಕುರಿಗಾಹಿ ಸದಸ್ಯರುಗಳಿಗೆ 20+1 ಕುರಿ/ಮೇಕೆ ಘಟಕಗಳನ್ನು ಒದಗಿಸಲಾಗುವುದು.</li></ul>
<table>
<tr><th>ಘಟಕ ವೆಚ್ಚ</th><th>ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ (NCDC), ಸಹಕಾರ ಇಲಾಖೆ, ಭಾರತ ಸರ್ಕಾರದ ವತಿಯಿಂದ ಸಾಲ ( ಶೇ 50 ರಷ್ಟು)</th><th>ರಾಜ್ಯ ಸರ್ಕಾರದ ಸಹಾಯಧನ (ಶೇ.25 ರಷ್ಟು)</th><th>ಫಲಾನುಭವಿ ವಂತಿಕೆ (ಶೇ.25 ರಷ್ಟು)</th></tr>
<tr><td>ರೂ.175000/-</td><td>ರೂ.87500/-</td><td>ರೂ.43750/-</td><td>ರೂ.43750/-</td></tr>
</table>
<ul><li>ಸಣ್ಣ ಪ್ರಾಣಿಗಳ ಆಕಸ್ಮಿಕ ಸಾವಿಗೆ ಆಪತ್ತು ನಿಧಿ :<br>ಪ್ರಕೃತಿ ವಿಕೋಪ ಪರಿಹಾರ ವ್ಯಾಪ್ತಿಯಲ್ಲಿ ಬರುವ ಹಾಗೂ ವಿಮೆ ಮಾಡಿಸಿದ ಪ್ರಕರಣಗಳನ್ನು ಹೊರತುಪಡಿಸಿ ಇನ್ನುಳಿದ ಸಂದರ್ಭಗಳಲ್ಲಿ 6 ತಿಂಗಳು ಮೇಲ್ಪಟ್ಟ ಕುರಿ ಮತ್ತು ಮೇಕೆ ಆಕಸ್ಮಿಕ ಅಥವಾ ದೃಢೀಕೃತ ಸಾಂಕ್ರಾಮಿಕ ರೋಗಗಳಿಂದ ಮರಣ ಹೊಂದಿದ ಪ್ರಕರಣಗಳಲ್ಲಿ ಕುರಿ /ಮೇಕೆ ಗೆ ರೂ. 5000/- ಪರಿಹಾರ ಧನ ಹಾಗೂ 3-6 ತಿಂಗಳ ವಯಸ್ಸಿನ ಕುರಿ ಮತ್ತು ಮೇಕೆಗಳ ಆಕಸ್ಮಿಕ ಮರಣಕ್ಕೆ ರೂ. 3500/- ಪರಿಹಾರ ಧನ ಒದಗಿಸಲಾಗುವುದು.</li></ul></td></tr>
<tr><td>3</td><td>ಲಸಿಕಾ ಕಾರ್ಯಕ್ರಮ</td><td><ul><li>ಗುರುತಿಸಲ್ಪಟ್ಟ ಸಾಂಕ್ರಾಮಿಕ ರೋಗಗಳ ವಿರುದ್ಧ ಲಸಿಕೆ ಹಾಕುವುದು.</li><li>ಕಾಲುಬಾಯಿಜ್ವರ, ಕಂದುರೋಗ, ಪಿಪಿಆರ್ ಮತ್ತು ಹಂದಿ ಜ್ವರ ರೋಗದ ವಿರುದ್ಧ ಲಸಿಕಾ ಕಾರ್ಯಕ್ರಮಕ್ಕೆ ಶೇ. 100 ಕೇಂದ್ರದ ಅನುದಾನ</li><li>ಆಸ್ಕ್ಯಾಡ್ ಯೋಜನೆಯಡಿಯಲ್ಲಿ ಶೇ. 60 ಕೇಂದ್ರದ ಪಾಲು ಹಾಗೂ ಶೇ. 40 ರಾಜ್ಯದ ಪಾಲು ಅನುದಾನದಲ್ಲಿ ಗಳಲೇರೋಗ, , ಕರುಳುಬೇನೆ, ಚರ್ಮಗಂಟು ರೋಗ, ಹುಚ್ಚುನಾಯಿ ರೋಗಗಳ ವಿರುದ್ಧ ಲಸಿಕೆ ಹಾಕುವುದು.</li></ul></td></tr>
<tr><td>4</td><td>ರಾಷ್ಟ್ರೀಯ ಜಾನುವಾರು ಮಿಷನ್ (ಕೇಂದ್ರ ಪುರಸ್ಕೃತ ಯೋಜನೆ):</td><td><ul><li>ವಿಪತ್ತು ನಿರ್ವಹಣೆ-ಜಾನುವಾರು ವಿಮಾ ಯೋಜನೆ,</li></ul></td></tr>
</table>

<table>
<tr><td>5</td><td>ಚರ್ಮಗಂಟು ರೋಗದಿಂದ ಮರಣ ಹೊಂದಿದ ರಾಸುಗಳಿಗೆ ಪರಿಹಾರಧನ:</td><td>• ಚರ್ಮಗಂಟು ರೋಗದಿಂದ ಮರಣ ಹೊಂದಿದ ರಾಸುಗಳಿಗೆ ಅವುಗಳ ಮಾಲೀಕರಿಗೆ ಪರಿಹಾರಧನ ವಿತರಿಸಲಾಗಿದೆ.</td></tr>
<tr><td>6</td><td>ರಾಸುಗಳ ಆಕಸ್ಮಿಕ ಆಪತ್ತು ನಿಧಿ:</td><td>• ರಾಸುಗಳು ಆಕಸ್ಮಿಕ ಮರಣ ಹೊಂದಿದಾಗ ರೈತರಿಗೆ ಉಂಟಾಗುವ ಆರ್ಥಿಕ ನಷ್ಟವನ್ನು ಆಂಶಿಕವಾಗಿ ಭರಿಸಲು ಮರಣ ಹೊಂದಿದ ದನ, ಎಮ್ಮೆ, ಎತ್ತು, ಹೋರಿ, ಕಡಸು, ಮತ್ತು ಮಣಕಗಳಿಗೆ ರೂ.10,000/- ಪರಿಹಾರಧನವನ್ನು ರಾಸುಗಳ ಮಾಲೀಕರಿಗೆ ವಿತರಿಸಲಾಗುವುದು.</td></tr>
<tr><td>7</td><td>ಮುಖ್ಯಮಂತ್ರಿಗಳ ಅಮೃತ ಜೀವನ ಯೋಜನೆ:</td><td>• ಆರ್.ಕೆ. ವಿ. ವೈ. ಯೋಜನೆಯಡಿ ಕೃಷಿ ಕೂಲಿ ಕಾರ್ಮಿಕರಿಗೆ ಮತ್ತು ಪಶು ಸಂಗೋಪನೆಯಲ್ಲಿ ತೊಡಗಿಸಿಕೊಂಡ ಆಸಕ್ತ ರೈತರಿಗೆ ಒಂದು ಮಿಶ್ರ ತಳಿ ಹಾಲು ಕರೆಯುವ ಹಸು ಘಟಕದ ವಿತರಣೆ
<table>
<tr><td rowspan="2">ಕ್ರ ಸಂ</td><td rowspan="2">ಘಟಕದ ವಿವರ</td><td rowspan="2">ಘಟಕದ ಮೊತ್ತ</td><td colspan="2">ಸಹಾಯಧನ</td></tr>
<tr><td>ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳು ಶೇ.33.33</td><td>ಸಾಮಾನ್ಯ ವರ್ಗ ಶೇ.25</td></tr>
<tr><td>1</td><td>ಹೈನುಗಾರಿಕೆ ಘಟಕ : ಒಂದು ಮಿಶ್ರ ತಳಿ ಹಾಲು ಕರೆಯುವ ಹಸು</td><td>ರೂ. 62000/-</td><td>ರೂ. 20665/-</td><td>ರೂ. 15500/-</td></tr>
<tr><td></td><td colspan="4">ಘಟಕದ ಸಹಾಯಧನ ಹೊರತುಪಡಿಸಿದಂತೆ ಉಳಿದ ಮೊತ್ತವನ್ನು ಫಲಾನುಭವಿಗಳಿಗೆ ವಂತಿಕೆ ಅಥವಾ ಸಾಲದ ರೂಪದಲ್ಲಿ ಬ್ಯಾಂಕಿನಿಂದ ಪಡೆಯುವುದು</td></tr>
</table></td></tr>
<tr><td>8</td><td>ಕೃತಕ ಗರ್ಭಧಾರಣೆ:</td><td>• ರಾಜ್ಯದಲ್ಲಿ ಕೃತಕ ಗರ್ಭಧಾರಣಾ ಕಾರ್ಯಕ್ರಮವು ಮಹತ್ವಾಕಾಂಕ್ಷಿ ಯೋಜನೆಯಾಗಿದ್ದು 4234 ಪಶುವೈದ್ಯ ಸಂಸ್ಥೆಗಳಲ್ಲಿ ಪ್ರತಿನಿತ್ಯ ಕೃತಕ ಗರ್ಭಧಾರಣೆ ಕೈಗೊಳ್ಳಲಾಗುತ್ತಿದೆ.</td></tr>
<tr><td>9</td><td>ಹೈನುಘಟಕ ವಿತರಣೆ</td><td>• ಹಾಲು ಉತ್ಪಾದಕರಿಗೆ ಉತ್ತೇಜನ ಕಾರ್ಯಕ್ರಮದ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ಉಳಿಕೆಯಾಗುವ ಅನುದಾನದಲ್ಲಿ ಒಂದು ಮಿಶ್ರತಳಿ ಹಸು ಘಟಕವನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ವಿತರಿಸಲಾಗುವುದು.
<table>
<tr><td rowspan="2">ಕ್ರ ಸಂ</td><td rowspan="2">ಘಟಕದ ವಿವರ</td><td rowspan="2">ಘಟಕದ ಮೊತ್ತ</td><td>ಸಹಾಯಧನ</td></tr>
<tr><td>ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳು ಶೇ.90</td></tr>
<tr><td>1</td><td>ಹೈನು ಘಟಕ : ಒಂದು ಮಿಶ್ರ ತಳಿ ಹಸು</td><td>ರೂ. 65000/</td><td>ರೂ. 58500/-</td></tr>
<tr><td></td><td colspan="3">ಘಟಕದ ಸಹಾಯಧನ ಹೊರತುಪಡಿಸಿದಂತೆ ಉಳಿದ ಮೊತ್ತವನ್ನು ಫಲಾನುಭವಿಗಳಿಗೆ ವಂತಿಕೆ ಅಥವಾ ಸಾಲದ ರೂಪದಲ್ಲಿ ಬ್ಯಾಂಕಿನಿಂದ ಪಡೆಯುವುದು</td></tr>
</table></td></tr>
<tr><td>10</td><td>ಸುಸಜ್ಜಿತ ಸಂಚಾರಿ ಪಶುಚಿಕಿತ್ಸಾ ವಾಹನ</td><td>• ರೈತರ ಮನೆಬಾಗಿಲಿಗೆ ತುರ್ತು ಪಶುವೈದ್ಯಕೀಯ ಸೇವೆಯನ್ನು ನೀಡಲು 290 ಸುಸಜ್ಜಿತ ಸಂಚಾರಿ ಪಶುಚಿಕಿತ್ಸಾ ವಾಹನಗಳನ್ನು ಒದಗಿಸಲಾಗಿರುತ್ತದೆ. ಜಾನುವಾರು ಚಿಕಿತ್ಸೆ ಅಗತ್ಯವಿರುವ ಜಾನುವಾರು ಮಾಲೀಕರು ಸಹಾಯವಾಣಿ ಸಂಖ್ಯೆ 1962 ಕ್ಕೆ ಕರೆಮಾಡಿ ಅಗತ್ಯ ಸೇವೆಗಳನ್ನು ಪಡೆಯಬಹುದಾಗಿದೆ.</td></tr>
<tr><td>11</td><td>ಪ್ರಾಣಿ ಕಲ್ಯಾಣ ಸಹಾಯವಾಣಿ:</td><td>• ಜಾನುವಾರುಗಳಿಗೆ 24/7 ನಿರಂತರ ಸೇವೆಯನ್ನು ಒದಗಿಸಲು ಪ್ರಾಣಿ ಕಲ್ಯಾಣ ಸಹಾಯವಾಣಿ ಸಂಖ್ಯೆ 8277100200 ಯನ್ನು ಕಲ್ಪಿಸಲಾಗಿದ್ದು, ರೈತರು ಸಹಾಯವಾಣಿಯನ್ನು ಸಂಪರ್ಕಿಸಿ ಇಲಾಖೆಯ ತಾಂತ್ರಿಕ ಸೇವೆ ಪಡೆಯಬಹುದಾಗಿದೆ.</td></tr>
</table>

AHF/19/AHP/2023-AHF_SEC_B_AH-Animal Husbandry Fisheries sec-Part(4)

## ಅನುಬಂಧ-೨

2023-24ನೇ ಸಾಲಿನಲ್ಲಿ ಹಾಲು ಉತ್ಪಾದಕರಿಗೆ ಪ್ರೋತ್ಸಾಹಧನ ಕಾರ್ಯಕ್ರಮದ 422-ವಿಶೇಷ ಘಟಕ ಯೋಜನೆ ಮತ್ತು 423- ಗಿರಿಜನ ಉಪ ಯೋಜನೆಗಳಡಿಯಲ್ಲಿ ಉಳಿಕೆಯಾಗುವ ಅನುದಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹಾಲು ಉತ್ಪಾದಕರ ಸಹಕಾರ ಸಂಘದ ಸದಸ್ಯರುಗಳಿಗೆ ಅನುಷ್ಠಾನಗೊಳಿಸುವ ಒಂದು ಮಿಶ್ರ ತಳಿ ಹಸು ಘಟಕದ ಜಿಲ್ಲಾವಾರು ಆರ್ಥಿಕ ಮತ್ತು ಭೌತಿಕ ಗುರಿಗಳ ವಿವರ.

| ಕ್ರ. ಸಂ. | ಜಿಲ್ಲೆಗಳು | 422-ವಿಶೇಷ ಘಟಕ ಯೋಜನೆ | | 423-ಗಿರಿಜನ ಉಪ ಯೋಜನೆ | |
|---|---|---|---|---|---|
| | | ಆರ್ಥಿಕ (ರೂಗಳಲ್ಲಿ) | ಭೌತಿಕ | ಆರ್ಥಿಕ (ರೂಗಳಲ್ಲಿ) | ಭೌತಿಕ |
| 1 | ಬೆಂಗಳೂರು ನಗರ | 1345500 | 23 | 409500 | 07 |
| 2 | ಬೆಂಗಳೂರು ಗ್ರಾ. | 1228500 | 21 | 643500 | 11 |
| 3 | ಚಿತ್ರದುರ್ಗ | 2223000 | 38 | 3861000 | 66 |
| 4 | ಚಿಕ್ಕಬಳ್ಳಾಪುರ | 1813500 | 31 | 2047500 | 35 |
| 5 | ದಾವಣಗೆರೆ | 2106000 | 36 | 2808000 | 48 |
| 6 | ಕೋಲಾರ | 2164500 | 37 | 1053000 | 18 |
| 7 | ರಾಮನಗರ | 1111500 | 19 | 292500 | 05 |
| 8 | ಶಿವಮೊಗ್ಗ | 1521000 | 26 | 702000 | 12 |
| 9 | ತುಮಕೂರು | 2866500 | 49 | 2632500 | 45 |
| 10 | ಮೈಸೂರು | 2515500 | 43 | 3744000 | 64 |
| 11 | ಚಾಮರಾಜನಗರ | 1462500 | 25 | 1404000 | 24 |
| 12 | ಚಿಕ್ಕಮಗಳೂರು | 1462500 | 25 | 585000 | 10 |
| 13 | ದಕ್ಷಿಣ ಕನ್ನಡ | 702000 | 12 | 936000 | 16 |
| 14 | ಹಾಸನ | 1989000 | 34 | 409500 | 07 |
| 15 | ಕೊಡಗು | 409500 | 07 | 819000 | 14 |
| 16 | ಮಂಡ್ಯ | 1462500 | 25 | 234000 | 04 |
| 17 | ಉಡುಪಿ | 351000 | 06 | 585000 | 10 |
| 18 | ಬೆಳಗಾವಿ | 2983500 | 51 | 3685500 | 63 |
| 19 | ಬಾಗಲಕೋಟೆ | 1579500 | 27 | 1170000 | 20 |
| 20 | ಧಾರವಾಡ | 468000 | 08 | 702000 | 12 |
| 21 | ಗದಗ | 877500 | 15 | 760500 | 13 |
| 22 | ಹಾವೇರಿ | 1228500 | 21 | 1813500 | 31 |
| 23 | ಉತ್ತರ ಕನ್ನಡ | 526500 | 09 | 409500 | 07 |
| 24 | ವಿಜಯಪುರ | 2457000 | 42 | 468000 | 08 |
| 25 | ಕಲಬುರಗಿ | 3276000 | 56 | 702000 | 12 |
| 26 | ಬಳ್ಳಾರಿ | 2457000 | 42 | 4855500 | 83 |
| 27 | ಬೀದರ್ | 2223000 | 38 | 3159000 | 54 |
| 28 | ಕೊಪ್ಪಳ | 1462500 | 25 | 2281500 | 39 |
| 29 | ರಾಯಚೂರು | 2106000 | 36 | 4914000 | 84 |
| 30 | ಯಾದಗಿರಿ | 1579500 | 27 | 1872000 | 32 |
| 31 | ವಿಜಯನಗರ | | | | |
| | ಒಟ್ಟು: | 49959000 | 854 | 49959000 | 854 |

(ಶರಣಬಸಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ)

AHF/19/AHP/2023-AHF_SEC_B_AH-Animal Husbandry Fisheries sec-Part(4)

**ಕರ್ನಾಟಕ ಸರ್ಕಾರ**

ಸಂಖ್ಯೆ:ಇ-ಪಸಂಮೀ 19 ಪಪಾಯೋ 2023 (ಭಾ-4)

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು, ದಿನಾಂಕ:02.12.2023

**ತಿದ್ದುಪಡಿ/ಸೇರ್ಪಡೆ**

ಸರ್ಕಾರದ ಆದೇಶ ಸಂಖ್ಯೆ: ಇ-ಪಸಂಮೀ 19 ಪಪಾಯೋ 2023 (ಭಾಗ-4), ದಿನಾಂಕ:10.11.2023ರಂದು 2023-24ನೇ ಸಾಲಿನ ಹಾಲು ಉತ್ಪಾದಕರಿಗೆ ಉತ್ತೇಜನ ಕಾರ್ಯಕ್ರಮದ ಉಳಿಕೆ ಅನುದಾನದಲ್ಲಿ ರಾಜ್ಯ ಅಭಿವೃದ್ಧಿ ಪರಿಷತ್ ಸಭೆಯ ನಡವಳಿಯಂತೆ SCSP/TSP ಫಲಾನುಭವಿಗಳಿಗೆ ಒಂದು ಮಿಶ್ರತಳಿ ಹಸು ಘಟಕವನ್ನು ಅನುಷ್ಠಾನಗೊಳಿಸುವ ಯೋಜನೆಗೆ ಅನುಸರಿಸಬೇಕಾದ ಮಾರ್ಗಸೂಚಿಗಳಿಗೆ ಸದರಿ ಆದೇಶಕ್ಕೆ ಲಗತ್ತಿಸಿರುವ ಅನುಬಂಧದ ರೀತ್ಯಾ ಅನುಮೋದನೆ ನೀಡಿ ಆದೇಶಿಸಲಾಗಿದೆ.

ಸದರಿ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿರುವ ಮಾರ್ಗಸೂಚಿಯಲ್ಲಿನ ಕ್ರಮ ಸಂಖ್ಯೆ:IV **ಫಲಾನುಭವಿಯ ಆಯ್ಕೆ** ರಡಿ **ಫಲಾನುಭವಿ ಆಯ್ಕೆ ಸಮಿತಿ ಹಾಗೂ ಮೇಲ್ವಿಚಾರಣೆ ಸಮಿತಿ** ಈ ಕೆಳಕಂಡ ಪಟ್ಟಿಯಂತೆ ನಮೂದಾಗಿರುತ್ತದೆ.

| **ಫಲಾನುಭವಿ ಆಯ್ಕೆ ಸಮಿತಿ ಹಾಗೂ ಮೇಲ್ವಿಚಾರಣೆ ಸಮಿತಿ** | | |
|---|---|---|
| 1. | ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು | ಅಧ್ಯಕ್ಷರು |
| 2. | ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಖಾಯಂ ಆಗಿ ವಾಸಿಸುತ್ತಿರುವ ವಿಧಾನ ಪರಿಷತ್ತಿನ ಶಾಸಕರು (ವಿಧಾನ ಪರಿಷತ್ತು) | ಸದಸ್ಯರು |
| 3. | ಉಪ ವ್ಯವಸ್ಥಾಪಕರು, ಸಂಬಂಧಿಸಿದ ಜಿಲ್ಲಾ ಹಾಲು ಒಕ್ಕೂಟ/ಪ್ರತಿನಿಧಿ | ಸದಸ್ಯರು |
| 4. | ಕಾರ್ಯನಿರ್ವಹಣಾ ಅಧಿಕಾರಿ,ತಾಲ್ಲೂಕು ಪಂಚಾಯತಿ | ಸದಸ್ಯರು |
| 5. | ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಅಧಿಕಾರಿ | ಸದಸ್ಯರು |

...2

| | | |
|---|---|---|
| 6. | ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿ | ಸದಸ್ಯರು |
| 7. | ಮುಖ್ಯ ಪಶುವೈದ್ಯಾಧಿಕಾರಿ (ಆಡಳಿತ), ಪಶುಪಾಲನಾ ಇಲಾಖೆ | ಸದಸ್ಯ ಕಾರ್ಯದರ್ಶಿ |

ಮೇಲ್ಕಂಡ ಪಟ್ಟಿಯಂತೆ ನಮೂದಾಗಿರುವುದನ್ನು ಕೈಬಿಟ್ಟು ಈ ಕೆಳಗಿನ ಪಟ್ಟಿಯಂತೆ ಸೇರಿಸಿ/ತಿದ್ದಿ ಓದಿಕೊಳ್ಳತಕ್ಕದ್ದು.

| **ಫಲಾನುಭವಿ ಆಯ್ಕೆ ಸಮಿತಿ ಹಾಗೂ ಮೇಲ್ವಿಚಾರಣೆ ಸಮಿತಿ** | | |
|---|---|---|
| 1. | ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು | ಅಧ್ಯಕ್ಷರು |
| 2. | ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಖಾಯಂ ಆಗಿ ವಾಸಿಸುತ್ತಿರುವ ವಿಧಾನ ಪರಿಷತ್ತಿನ ಶಾಸಕರು (ವಿಧಾನ ಪರಿಷತ್ತು) | ಸದಸ್ಯರು |
| 3. | ಉಪ ವ್ಯವಸ್ಥಾಪಕರು, ಸಂಬಂಧಿಸಿದ ಜಿಲ್ಲಾ ಹಾಲು ಒಕ್ಕೂಟ/ಪ್ರತಿನಿಧಿ | ಸದಸ್ಯರು |
| 4. | ಕಾರ್ಯನಿರ್ವಹಣಾ ಅಧಿಕಾರಿ,ತಾಲ್ಲೂಕು ಪಂಚಾಯತಿ | ಸದಸ್ಯರು |
| 5. | ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಅಧಿಕಾರಿ | ಸದಸ್ಯರು |
| 6. | ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿ | ಸದಸ್ಯರು |
| 7. | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದಿಂದ-ಒಬ್ಬರು **(ಸರ್ಕಾರದಿಂದ ನಾಮನಿರ್ದೇಶನಗೊಳ್ಳುವ)** | ಅಧಿಕಾರೇತರ ಸದಸ್ಯರು |
| 8. | ಹಿಂದುಳಿದ ವರ್ಗಗಳು/ಅಲ್ಪಸಂಖ್ಯಾತ ಸಮುದಾಯದಿಂದ-ಒಬ್ಬರು **(ಸರ್ಕಾರದಿಂದ ನಾಮನಿರ್ದೇಶನಗೊಳ್ಳುವ)** | ಅಧಿಕಾರೇತರ ಸದಸ್ಯರು |
| 9 | ಸಾಮಾನ್ಯ ವರ್ಗದಿಂದ - ಒಬ್ಬರು **(ಸರ್ಕಾರದಿಂದ ನಾಮನಿರ್ದೇಶನಗೊಳ್ಳುವ)** | ಅಧಿಕಾರೇತರ ಸದಸ್ಯರು |
| 10 | ಮಹಿಳಾ ಸದಸ್ಯರು-ಒಬ್ಬರು **(ಸರ್ಕಾರದಿಂದ ನಾಮನಿರ್ದೇಶನಗೊಳ್ಳುವ)** | ಅಧಿಕಾರೇತರ ಸದಸ್ಯರು |
| 11 | ಮುಖ್ಯ ಪಶುವೈದ್ಯಾಧಿಕಾರಿ (ಆಡಳಿತ), ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ. | ಸದಸ್ಯ ಕಾರ್ಯದರ್ಶಿ |

ಉಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

02/12/23
**(ಶರಣಬಸಪ್ಪ)**
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ)
02/12

**ಗೆ:**

1. ಮಹಾಲೇಖಪಾಲರು (ಎ ಮತ್ತು ಇ) ಕರ್ನಾಟಕ, ಬೆಂಗಳೂರು.

...3

2. ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.
3. ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
4. ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
5. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ–4), ವಿಧಾನಸೌಧ.
6. ಖಜಾನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
7. ಉಪ ನಿರ್ದೇಶಕರು, ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು.
8. ಖಜಾನಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

**ಪ್ರತಿಗಳು:**

1. ಮಾನ್ಯ ಪಶುಸಂಗೋಪನೆ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
4. ಕಂಟ್ರೋಲ್ ರೂಂ ಕಂ–24/7 ಹೆಲ್ಪ್ ಲೈನ್ (ಸಹಾಯವಾಣಿ) ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಹೆಬ್ಬಾಳ, ಬೆಂಗಳೂರು.
5. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.